**ದಿನಾಂಕಃ 05.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಎಂ.ಡಿ. ವಕೀಲರಿಂದ ವಾದಿಯ ಪರವಾಗಿ :**

ನಾನು ಈ ಪ್ರಕರಣದಲ್ಲಿ ಪಕ್ಷಗಾರರಲ್ಲ ಎಂದರೆ ಸರಿ. ನಮ್ಮ ಕುಟುಂಬದ ವ್ಯವಹಾರವನ್ನು 1 ನೇ ಪ್ರತಿವಾದಿ ನೋಡಿ ಕೊಳ್ಳುತ್ತಿದ್ದಾರೆ ಎಂದರೆ ಸರಿ. ಅವರು ಮೂಲತ: ತಿ. ನರಸೀಪುರ ತಾಲ್ಲೂಕಿನ ಮೂಗೂರು ಗ್ರಾಮದವರು ಎಂದರೆ ಸರಿ. ಜಮೀನನ್ನು ನಾನು ಮಾಡಿಸುತ್ತೇನೆ, 1 ನೇ ಪ್ರತಿವಾದಿ ಮಾಡಿಸುವುದಿಲ್ಲ.

ನಿಡಿ.1 ನ್ನು 1 ನೇ ಪ್ರತಿವಾದಿ ನನಗೆ ಬರೆದುಕೊಡುವ ಮೊದಲು ಅವರು ನ್ಯಾಯಾಲಯಕ್ಕೆ ಬಂದು ಹೋಗುತ್ತಿದ್ದರು ಎಂದರೆ, ಸ್ವಲ್ಪ ದಿನಗಳವರೆಗೆ ಬಂದು ಹೋಗುತ್ತಿದ್ದರು, ಆನಂತರ ಬಂದಿಲ್ಲ. ನಿಡಿ.1 ನ್ನು 1 ನೇ ಪ್ರತಿವಾದಿ ನನಗೆ ತಿ. ನರಸೀಪುರದಲ್ಲಿ ವಕೀಲರ ಕಚೇರಿಯಲ್ಲಿ ಬರೆದು ಕೊಟ್ಟಿದ್ದಾರೆ.

ನನ್ನ ಗಂಡ 1 ನೇ ಪ್ರತಿವಾದಿಗೆ ಶ್ವಾಸಕೋಶದ ಸಮಸ್ಯೆ ಇರುವುದರಿಂದ ಅವರು ನನಗೆ ನಿಡಿ.1 ರ ಪತ್ರವನ್ನು ನೀಡಿದ್ದಾರೆ ಎಂದು ಅದರಲ್ಲಿ ಹೇಳಲಾಗಿದೆ. ಅವರಿಗೆ ಆ ಸಮಸ್ಯೆಯಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಹಾಗಾಗಿ, ಅವರಿಗೆ ಆ ರೀತಿ ಸಮಸ್ಯೆ ಇರದೇ ದೈಹಿಕವಾಗಿ ಮತ್ತು ಮಾನಸಿಕವಾಗಿ ಸಮರ್ಥರಾಗಿದ್ದು, ನ್ಯಾಯಾಲಯದಲ್ಲಿ ಸಾಕ್ಷ್ಯವನ್ನು ಕೊಡಬಹುದು ಎಂದರೆ ಸರಿಯಲ್ಲ. ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನೀಡಿದರೆ ವಾಸ್ತವಾಂಶ ತಿಳಿಯಬಹುದು ಎಂದು ಅವರು ನ್ಯಾಯಾಲಯಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ.

ನಾನು ಎಸ್.ಎಸ್.ಎಲ್.ಸಿ. ವರೆಗೆ ವ್ಯಾಸಂಗ ಮಾಡಿದ್ದೇನೆ. ನನಗೆ ಕನ್ನ ಭಾಷೆಯನ್ನು ಓದಲು ಮತ್ತು ಬರೆಯಲು ಬರುತ್ತದೆ, ಇಂಗ್ಲೀಷ್ ಭಾಷೆಯನ್ನು ಅಷ್ಟಾಗಿ ಓದಲು ಮತ್ತು ಬರೆಯಲು ಬರುವುದಿಲ್ಲ.

ಈ ಪ್ರಕರಣವನ್ನು ದಾಖಲಿಸಿದ ನಂತರ ಒಂದು ವರ್ಷದವರೆಗೆ ನನ್ನ ಗಂಡ ದೈಹಿಕವಾಗಿ ಸಮರ್ಥರಾಗಿದ್ದರು. ಈ ಪ್ರಕರಣದಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರಕ್ಕೆ ನನ್ನ ಗಂಡ ಮಾಹಿತಿ ನೀಡಿದ್ದಾರೆ ಎಂದರೆ ಸರಿ, ಅವರ ಜೊತೆ ನಾನು ಕೂಡ ಬಂದಿದ್ದೆ. ಅವರು ಸಲ್ಲಿಸಿರುವ ಪ್ರತಿವಾದ ಪತ್ರದ ವಿಷಯಗಳು ನನಗೆ ಗೊತ್ತಿವೆ.

ಎಸ್.ವಿ. ನಾಗರಾಜಪ್ಪ ಎನ್ನುವವರು ನನ್ನ ಗಂಡನ ತಂದೆ ಎಂದರೆ ಸರಿ. ಮಹದೇವಮ್ಮ ರವರು ನನ್ನ ಗಂಡನ ತಾಯಿ ಎಂದರೆ ಸರಿ. ಅವರ ಮೂಲ ಕುಟುಂಬ ಮೂಗೂರು ಗ್ರಾಮದಲ್ಲಿ ವಾಸವಾಗಿತ್ತು ಎಂದರೆ ಸರಿ. ಅವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ನಾಲ್ಕು ಜನ ಹೆಣ್ಣುಮಕ್ಕಳು ಎಂದರೆ ಸರಿ.

ಸದರಿ ಎಸ್.ವಿ. ನಾಗರಾಜಪ್ಪರವರು ಬದುಕಿದ್ದಾಗ 4 ನೇ ಪ್ರತಿವಾದಿಯ ವಿವಾಹವನ್ನು ಹೊರತುಪಡಿಸಿ ಅವರ ಉಳಿದ ಮಕ್ಕಳ ವಿವಾಹ ಆಗಿತ್ತು ಎಂದರೆ ಸರಿ. ಅವರು ದಿನಾಂಕ 01.05.1988 ರಂದು ಮರಣ ಹೊಂದಿದರು ಎಂದರೆ ಸರಿ. ಅವರು ಬದುಕಿದ್ದಾಗ ಅವರ ಕುಟುಂಬದ ಆಸ್ತಿಗಳನ್ನು ಅವರ, ಅವರ ಹೆಂಡತಿ ಮತ್ತು ಗಂಡು ಮಕ್ಕಳ ನಡುವೆ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಆ ವಿಭಾಗದಲ್ಲಿ ಅವರ ಮತ್ತು ಅವರ ಹೆಂಡತಿಯ ಭಾಗಕ್ಕೆ ಅಜ್ಜಪಾಲು ಆಸ್ತಿಯನ್ನು ಮತ್ತು ದಾವಾಸ್ತಿ

ಕ್ರಮ ಸಂಖ್ಯೆ 2 ನ್ನು ಉಳಿಸಿಕೊಂಡಿದ್ದರು ಎಂದರೆ ಸರಿ. ಕ್ರಮ ಸಂಖ್ಯೆ 2 ರ ಮನೆಯು ಕೇವಲ ಮೌಖಿಕವಾಗಿ ವಿಭಾಗವಾಗಿತ್ತು. ಅದನ್ನು ವಿಂಗಡಣೆ ಮಾಡಿ ಯಾರಿಗೆ ಯಾವ ಭಾಗವೆಂದು ವಿಭಾಗ ಪತ್ರದಲ್ಲಿ ತೋರಿಸಿಲ್ಲ ಎಂದರೆ ಸರಿ. ಹಾಗಾಗಿ, ಆ ಮನೆಯ ಖಾತೆ ಈಗಲೂ ಕೂಡ ಸದರಿ ಎಸ್.ವಿ. ನಾಗರಾಜಪ್ಪರವರ ಹೆಸರಿನಲ್ಲಿದೆ ಎಂದರೆ ಸರಿ.

ದಾವಾಸ್ತಿ ಕ್ರಮ ಸಂಖ್ಯೆ 1 ಮತ್ತು ಸರ್ವೆ ನಂ.582 ರ 3 ಎಕರೆ 37 ಗುಂಟೆ ಆಸ್ತಿಗಳನ್ನು ನನ್ನ ಮಾವ ಮತ್ತು ಅತ್ತೆ ಅಜ್ಜಪಾಲು ರೂಪದಲ್ಲಿ ಉಳಿಸಿಕೊಂಡಿದ್ದರು ಎಂದರೆ ಸರಿ.

ದಿನಾಂಕ 09.05.1985 ರಂದು ನನ್ನ ಮಾವ ಸರ್ವೆ ನಂ.582 ರ 3 ಎಕರೆ 37 ಗುಂಟೆ ಆಸ್ತಿಯನ್ನು 4 ನೇ ಪ್ರತಿವಾದಿಗೆ ನಿಡಿ.2 ರ ಪ್ರಕಾರ ಮರಣ ಶಾಸನ ಮಾಡಿದ್ದರು ಎಂದರೆ ಸರಿ.

ದಾವಾಸ್ತಿ ಕ್ರಮ ಸಂಖ್ಯೆ 1 ರಲ್ಲಿ ಒಟ್ಟು 10 ಎಕರೆ 9 ಗುಂಟೆ ಆಸ್ತಿಯಿದೆ ಎಂದರೆ ಸರಿ. ಆ 10 ಎಕರೆ 9 ಗುಂಟೆ ಜಮೀನಿನಲ್ಲಿ ಪಶ್ಚಿಮದ ಕಡೆಗೆ 5 ಎಕರೆ 9 ಗುಂಟೆ ಜಮೀನನ್ನು 3 ನೇ ಪ್ರತಿವಾದಿಗೆ ನಿಡಿ.2 ರಲ್ಲಿ ಮರಣಶಾಸನ ಮಾಡಲಾಗಿದೆ ಎಂದರೆ 3 ಮತ್ತು 4 ನೇ ಪ್ರತಿವಾದಿಯರಿಗೆ ಸೇರಿ ಮರಣಶಾಸನ ಮಾಡಲಾಗಿದೆ. ಉಳಿದ 5 ಎಕರೆ ಜಮೀನನ್ನು ನನ್ನ ಅತ್ತೆಗೆ ನಿಡಿ.2 ರಲ್ಲಿ ಮರಣಶಾಸನ

ಮಾಡಲಾಗಿದೆ ಎಂದರೆ ಸರಿ. ಆ 5 ಎಕರೆ ಜಮೀನು ದಾವಾಸ್ತಿ ಕ್ರಮ ಸಂಖ್ಯೆ 1 ರ ಜಮೀನು ಎಂದರೆ ಸರಿ.

ದಾವಾಸ್ತಿ ಕ್ರಮ ಸಂಖ್ಯೆ 1 ರ ಜಮೀನು ನನ್ನ ಅತ್ತೆ ಮರಣ ಹೊಂದುವವರೆಗೂ ಅವರ ಸ್ವಾಧೀನದಲ್ಲಿತ್ತು ಎಂದರೆ ಸರಿ. ಅವರು ದಿನಾಂಕ 14.08.2008 ರಂದು ಮರಣ ಹೊಂದಿದರು ಎಂದರೆ ಸರಿ. ಅವರು ಮರಣ ಹೊಂದಿದಾಗ ಅವರಿಗೆ 85 ವರ್ಷಕ್ಕಿಂತ ಮೇಲ್ಪಟ್ಟು ವಯಸ್ಸಾಗಿತ್ತು ಎಂದರೆ ಸರಿ. ಹಾಗಾಗಿ, ಅವರು ಆ ವಯಸ್ಸಿನಲ್ಲಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಅಸಮರ್ಥರಾಗಿದ್ದರು ಎಂದರೆ ಸರಿಯಲ್ಲ, ಚೆನ್ನಾಗಿ ಓಡಾಡುತ್ತಿದ್ದರು. ಅವರಿಗೆ ಹೃದಯ ಸಂಬಂಧಿ ಕಾಯಿಲೆಯಿತ್ತು. ಹಾಗಾಗಿ, ಅವರು ಹೊರಗಡೆ ಓಡಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ಅತ್ತ ಮರಣ ಹೊಂದಿದಾಗ ನನ್ನ ಗಂಡ ಆರೋಗ್ಯವಾಗಿದ್ದರು ಎಂದರೆ ಸರಿ. ಅದೇ ರೀತಿ ವಾದಿಯ ಮತ್ತು ನನ್ನ ಗಂಡನ ನಡುವೆ ಆ ವೇಳೆಗೆ ಒಳ್ಳೇ ಸಂಬಂಧವಿತ್ತು. ನನ್ನ ಅತ್ತ ಮರಣ ಹೊಂದಿದ ನಂತರ ದಾವಾಸ್ತಿ ಕ್ರಮ ಸಂಖ್ಯೆ 1 ರಲ್ಲಿ ಹಿಸ್ಸೆಯನ್ನು ಕೊಡುವಂತೆ ವಾದಿಯು ನನ್ನ ಗಂಡನನ್ನು ಕೇಳಿದ್ದರು ಎಂದರೆ ಸರಿಯಲ್ಲ.

ವಾದಿಯು ದಿನಾಂಕ 19.09.2016 ರಂದು ನನ್ನ ಗಂಡನಿಗೆ ಮತ್ತು ಇತರೆ ಪ್ರತಿವಾದಿಯರಿಗೆ ನೋಟೀಸ್‌ನ್ನು ನೀಡಿ ದಾವಾಸ್ತಿಗಳಲ್ಲಿ ವಿಭಾಗವನ್ನು ಕೇಳಿದ್ದರು ಎಂದರೆ ಸರಿಯಲ್ಲ.

ಈ ದಾವಾದಲ್ಲಿ ನ್ಯಾಯಾಲಯದಿಂದ ಸಮನ್ಸ್ ಬಂದಾಗ ವಾದಪತ್ರದಲ್ಲಿ ತೋರಿಸಿರುವ ನನ್ನ ಗಂಡನ ವಿಳಾಸದಲ್ಲಿ ನಾವು ವಾಸವಾಗಿದ್ದೆವು ಎಂದರೆ ಸರಿ. ಈ ಪ್ರಕರಣವನ್ನು ದಾಖಲಿಸುವ 10 ವರ್ಷಗಳ ಪೂರ್ವದಿಂದಲೂ ಅಲ್ಲಿ ವಾಸವಾಗಿದ್ದೇವೆ. ನನ್ನ ಅತ್ತೆ ಮರಣ ಹೊಂದಿದಾಗ ಮೈಸೂರಿನ ಗೋಕುಲಂನಲ್ಲಿ ವಾಸವಾಗಿದ್ದು, ಅವರು ಮರಣ ಹೊಂದಿದ ನಂತರ ಮೈಸೂರಿನ ರಾಮಕೃಷ್ಣ ನಗರದಲ್ಲಿ ವಾಸವಾಗಿದ್ದೇವೆ. ಆ ವಿಳಾಸಕ್ಕೆ ಬಂದ ನ್ಯಾಯಾಲಯದ ಸಮನ್ಸ್‌ನ್ನು ಪಡೆದು ನನ್ನ ಗಂಡ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಸರಿ.

ವಾದಪತ್ರದಲ್ಲಿ ತೋರಿಸಿರುವ ನನ್ನ ಗಂಡನ ವಿಳಾಸಕ್ಕೆ ವಾದಿಯು ವಕೀಲರ ಮೂಲಕ ನೋಟೀಸ್‌ನ್ನು ನೀಡಿದ್ದರು ಎಂದರೆ ಸರಿ. ನಿಪಿ.14 ರ ಅಂಚೆ ಕವರ್‌ನಲ್ಲಿ ನಾವು ನೋಟೀಸ್‌ನ್ನು ಸ್ವೀಕರಿಸಿಲ್ಲವೆಂದು ಹಿಂಬರಹ ಇದೆ ಎಂದರೆ ಸರಿ. ಆ ನೋಟೀಸ್ ವಾದಿಯ ಸಹೋದರಿಯರಿಗೆ ಜಾರಿಯಾಗಿವೆ ಎಂದರೆ ಸರಿ. ಆ ರೀತಿ ಜಾರಿಯಾದ ವಿಷಯ ನನ್ನ ಮತ್ತು ನನ್ನ ಗಂಡನ ತಿಳುವಳಿಕೆ ಬಂದಿತ್ತು ಎಂದರೆ ಸರಿಯಲ್ಲ. ಆ ನೋಟೀಸ್‌ನಲ್ಲಿ ವಾದಿಯು ವಿಭಾಗವನ್ನು ಕೇಳಿದ್ದಾರೆಂದು ನಮಗೆ ಗೊತ್ತಿದ್ದರಿಂದ ಅದನ್ನು ನಾವು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ.

ದಾವಾಸ್ತಿ ಕ್ರಮ ಸಂಖ್ಯೆ 1ರ ಖಾತೆಯು 2016ರವರೆಗೂ ನನ್ನ ಅತ್ತೆಯ ಹೆಸರಿನಲ್ಲಿತ್ತು ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು,**
**ತಿ.ನರಸೀಪುರ**